ಓ.ಎಸ್.ನಂ.255-2020

ಪಿ.ಡಬ್ಲು-೧

ದಿ:14.03.2025 ರಂದು ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

<u>**ಪಾಟೀ ಸವಾಲು**</u>: ಪ್ರತಿವಾದಿಗಳ ಪರ ಶ್ರೀಯುತ ಹೆಚ್.ಕೆ.ಎನ್. ವಕೀಲರಿಂದ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ತಿಳಿದಿವೆ. ನಾನು ಪ್ರಸ್ತುತ ದಾವೆಯನ್ನು ನಕ್ಷೆ ಸಲುವಾಗಿ ದಾಖಲಿಸಿರುತ್ತೇನೆ. ನಾನು ಪ್ರಸ್ತುತ ದಾವೆಯನ್ನು ತಮ್ಮರಸನಹಳ್ಳಿ ಗ್ರಾಮದ ಸರ್ವೆ ನಂ.88 ವಿಸ್ತೀರ್ಣ 10 ಎಕರೆ ಜಮೀನಿನ ಪೈಕಿ 3 ಎಕರೆ ಜಮೀನಿನ ಕುರಿತು ದಾವೆ ಮಾಡಿರುತ್ತೇನೆ. ನಾನು ಪ್ರಸ್ತುತ ದಾವೆಯನ್ನು 3.10 ಎಕರೆ ಜಮೀನಿನ ಮೇಲೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಜಮೀನಿನ ಚಕ್ಕುಬಂದಿಗಳು ತಿಳಿದಿವೆ ಮತ್ತು ಅವುಗಳು ಪಶ್ಚಿಮಕ್ಕೆ ಎಸ್.ಆರ್.ಮುನಿಸ್ವಾಮಿರವರ ಜಮೀನು, ಪೂರ್ವಕ್ಕೆ ವೀಣಾ, ದೇವಿಕಾ ,ಮಮತ ಮತ್ತು ಮಂಜುನಾಥ ರವರ ಜಮೀನು, ಉತ್ತರಕ್ಕೆ ದಾರಿ, ದಕ್ಷಿಣಕ್ಕೆ ಎನ್.ಮುನಿಯಪ್ಪ ರವರ ಜಮೀನು ಇರುತ್ತದೆ. ಪ್ರಸ್ತುತ ದಾವಾ ಆಸ್ತಿಯಲ್ಲಿ ರಾಗಿ ಬೆಳೆ ಬೆಳೆಯಲಾಗಿರುತ್ತದೆ. ಆ ರೀತಿ ದಾವಾ ಆಸ್ತಿಯಲ್ಲಿ ರಾಗಿ ಬೆಳೆಯಲಾಗಿದೆ ಎಂದು ತೋರಿಸುವ ಕುರಿತು ಬೆಳೆ ದೃಢೀಕರಣ ಪತ್ರ ಅಥವಾ ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಮೂಲತ: ನನ್ನ ಹೆಂಡ್ತಿಯ ತಂದೆ ಆಸ್ತಿ ಆಗಿರುತ್ತದೆ. ನನ್ನ ಹೆಂಡ್ತಿಯ ತಂದೆಯ ಹೆಸರು ಎನ್.ಮುನಿಯಪ್ಪ ಇರುತ್ತದೆ. ಮುನಿಯಪ್ಪನಿಗೆ ಮೊದಲನೇ ಹೆಂಡ್ತಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಎರಡನೇ ಹೆಂಡ್ತಿಗೆ ಮೂರು ಜನ ಗಂಡು ಮಕ್ಕಳು ಮತ್ತು ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ.

<u>**ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.